# ನೊರೆಯಲ್ಲಿ ಬಂದಿ ಕ್ಯಾಮೆರಾದಲ್ಲಿ ಸೆರೆ

ಇದು ರೈತರ ಬೆಳೆಗಳನ್ನು ಹಾಳು ಮಾಡುವ ಕೀಟ. ಆದರೆ ಇದರ ನಿಯಂತ್ರಣವೂ ಬಲು ಸುಲಭ.

ಚಿತ್ರ– ಲೇಖನ:
**ಶಶಿಧರಸ್ವಾಮಿ ಆರ್. ಹಿರೇಮಠ**

ಯಾರೋ ಉಗುಳಿದ್ದು ಎಂದುಕೊಳ್ಳಬೇಡಿ. ಇದರೊಳಗೊಂದು ಜೀವಿ ಬದುಕುತ್ತದೆ! ಇದೊಂದು ವಯಸ್ಕ ಕಪ್ಪೆ ಮಿಡತೆ.

ಇದುತನ್ನ ಮೊಟ್ಟೆಗಳನ್ನು ಎಲೆಗಳ ಕೆಳಭಾಗ ಇಲ್ಲವೇ ಸಸ್ಯಕಾಂಡಗಳಲ್ಲಿ ಇಡುತ್ತದೆ. ಮೊಟ್ಟೆಯಿಂದ ಹೊರ ಬಂದ ಮರಿಹುಳುಗಳು ಎಲೆ ಹಾಗೂ ಕಾಂಡಗಳಿಂದ ರಸ ಹೀರಲು ಪ್ರಾರಂಭಿಸುತ್ತವೆ. ಇವು ತಮಗೆ ಹೊಟ್ಟೆ ತುಂಬಲು ಬೇಕಾದ ಪ್ರಮಾಣಕ್ಕಿಂತಲೂ ಹೆಚ್ಚು ರಸ ಹೀರಿಬಿಡುತ್ತವೆ. ಹೆಚ್ಚಾದ ರಸಾಹಾರವನ್ನು ಹೊರಹಾಕಲು ಇವು ದೇಹವನ್ನು ಸಂಕುಚಿತಗೊಳಿಸಿ ಗ್ರಂಥಿಗಳಿಂದ ಲೋಳೆಯನ್ನು ದೇಹದೊಳಗಿನ ಗಾಳಿಯೊಂದಿಗೆ ವಿಸರ್ಜನಾಂಗದ ಮೂಲಕ ಹೊರಹಾಕುತ್ತವೆ. ಆಗ ಅದು ನೊರೆಯಂತೆ ದೇಹವನ್ನು ಮುಚ್ಚಿ ಆವರಿಸಿಬಿಡುತ್ತದೆ.

(8ನೇ ಪುಟ ನೋಡಿ)



ವಿನ್ಯಾಸ: ದಿಲ್